

# ವಿಮಾನಯಾನ ಸುರಕ್ಷಿತವೆ?

**ಇನ್ನೇನು ವಿಮಾನಕ್ಕೆ ಬೆಂಕಿ ಹೊತ್ತಿಕೊಳ್ಳುತ್ತದೆ, ತಕ್ಷಣ ಹೊರಗೋಡಿ ಎಂದು ಗಗನಸಖಿಯರು ಕೂಗಿ ಹೇಳುತ್ತಿದ್ದರೂ ಹಲವಾರು ಪ್ರಯಾಣಿಕರು ತಮ್ಮ ಲ್ಯಾಪ್‌ಟಾಪ್‌ಗಳಿಗೆ ತಡಕಾಡುತ್ತಿದ್ದುದೇಕೆ? ಕೆಲವರು ಮೊಬೈಲ್ ಚಿತ್ರೀಕರಣ ನಡೆಸುತ್ತಿದ್ದುದೇಕೆ?**

■ **ಯೋಗೀಂದ್ರ ಮರವಂತೆ**

‘ಸೈಕಲ್ ಸವಾರಿಗಿಂತ ವಿಮಾನಯಾನ ಸುರಕ್ಷಿತ. ಜಗತ್ತಿನಲ್ಲಿ ಪ್ರತಿ ವರ್ಷ ಸೈಕಲ್ ಅಪಘಾತದಲ್ಲಿ ಸಾಯುವವರಿಗಿಂತ ಕಡಿಮೆ ಜನರು ವಿಮಾನ ದುರಂತದಲ್ಲಿ ಸಾಯುತ್ತಾರೆ’ ಎನ್ನುವ ಬಗ್ಗೆ ಪುರಾವೆಗಳನ್ನು ಕೊಟ್ಟು ಮಾತಾಡುವ ವಿಮಾನ ತಯಾರಿಕಾ ಕಂಪೆನಿಯ ಕಚೇರಿಯೊಂದರಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಕೆಲವು ವಿಷಯಗಳ ಮಟ್ಟಿಗೆ ಮನುಷ್ಯರಿಗಿಂತ ವಿಮಾನಗಳ ಜೊತೆ ಹತ್ತಿರವಾದ ಸಂಬಂಧ ಇರಿಸಿಕೊಂಡ ವಿಚಿತ್ರ ಜೀವಿಗಳು ನಾವು. ಜಗತ್ತಿನ ಯಾವ ಮೂಲೆಯಲ್ಲಿ ವಿಮಾನ ಅಪಘಾತ ಆದರೂ ನಮ್ಮಲ್ಲಿ ಕಳವಳ. ಇದು ನಮ್ಮ ಏರ್‌ಬಸ್ ಕಂಪೆನಿಯ ವಿಮಾನವೇ ಎನ್ನುವ ಪ್ರಶ್ನೆಯಿಂದ ಹಿಡಿದು ಈ ದುರಂತ ನಮಗೆ ಯಾವ ಪಾಠವನ್ನು ನೀಡಬಹುದು ಎನ್ನುವ ತನಕ ಚರ್ಚೆಗಳು ತಣ್ಣಗೆ ನಮ್ಮೊಳಗೇ ನಡೆಯುತ್ತವೆ. ಹಾಗೆಯೇ ವಿಮಾನವೊಂದು ಅಪಘಾತದಿಂದ ಪಾರಾದರೆ ವಿಮಾನ ವಿಜ್ಞಾನಕ್ಕೆ ಮತ್ತು ವಿನ್ಯಾಸಕ್ಕೆ ದೊರೆತ ಜಯ ಎಂದು ಬಗೆದು ಸಂತಸ ಪಡುತ್ತೇವೆ.

ಆಗಸ್ಟ್ 3ರಂದು ತಿರುವನಂತಪುರ ವಿಮಾನದ ಪ್ರಯಾಣಿಕರಿಗೆ ಮರುಜನ್ಮವನ್ನೂ, ವಿಮಾನ ತಯಾರಿಸಿದವರಿಗೆ ಹೆಮ್ಮೆಯನ್ನೂ ಮೂಡಿಸಿದ ಈ ವಿಮಾನ ಅವಘಡ ವಿಮಾನ ವಲಯದಲ್ಲೊಂದು ಕಲರವವನ್ನು ಹುಟ್ಟಿಸಿ ಹೊಸ ಚರ್ಚೆಗೆ ನಾಂದಿಯಾಗಿದೆ. ಇದಕ್ಕೆ ಕಾರಣ ಪ್ರಯಾಣಿಕನೊಬ್ಬ ವಿಮಾನದಿಂದ ತುರ್ತು ನಿರ್ಗಮಿಸ ಬೇಕಾದ ಕೊನೆಯ ಹೊತ್ತಲ್ಲಿ ತೆಗೆದ 83 ಸೆಕೆಂಡ್ ಗಳ ವೀಡಿಯೋ ಚಿತ್ರೀಕರಣ. ತ್ವರಿತವಾಗಿ ವಿಮಾನದಿಂದ ಹೊರಬೀಳಬೇಕಾದ ಸಂದರ್ಭದಲ್ಲಿ ತನ್ನ ಜೀವಕ್ಕೆ ಅಪಾಯ ಇದೆ ಎಂದು ತಿಳಿದೋ ಅಥವಾ ತಿಳಿಯದೆಯೋ ವಿಮಾನದ ಒಳಗೇನು ನಡೆಯುತ್ತಿದೆ, ವಿಮಾನ ಕಿಟಕಿಯ ಹೊರಗೆ ಏನು ಕಾಣುತ್ತಿದೆ ಎಂದು ವೀಡಿಯೋ ಚಿತ್ರೀಕರಿಸುವ ಮನೋಸ್ಥಿತಿ ಚರ್ಚೆಯ ಒಂದು ವಿಷಯ.

ಅವತ್ತು ಗಗನಸಖಿಯರು ವಿಮಾನ ಸಿಬ್ಬಂದಿಗಳು ಪ್ರಯಾಣಿಕರ ಬಳಿ ‘ತುರ್ತಾಗಿ ನಿರ್ಗಮಿಸಿ’ ಎಂದು ಗಂಟಲು ಬಿರಿಯುವಂತೆ ಕೂಗುವ ಹೊತ್ತಲ್ಲಿ ಹಲವು ಪ್ರಯಾಣಿಕರು ತಮ್ಮ ಬ್ಯಾಗ್ ಎಲ್ಲಿದೆ, ಲ್ಯಾಪ್ಟಾಪ್ ಎಲ್ಲಿದೆ ಎಂದು ಅರಸುತ್ತಿದ್ದರು! ಸ್ವಲ್ಪ ತಡ ಆದರೂ ಪರವಾಗಿಲ್ಲ ತಮ್ಮ ಸಾಮಾನುಗಳನ್ನು ಹಿಡಿದುಕೊಂಡೆ ಹೊರಬೀಳುವ ಯೋಚನೆಯಲ್ಲಿ ಅವರಿದ್ದರು! ಹೀಗೆ ತಮ್ಮ ಸ್ವತ್ತನ್ನು ತೆಗೆಯುವ ಭರಾಟೆಯಲ್ಲಿ ತಮ್ಮ ಜೀವದೊಂದಿಗೆ ಆಟವಾಡುವುದರ ಜೊತೆಗೆ, ವಿಮಾನದಿಂದ ಹೊರನಡೆಯಬೇಕಾದ ಇತರ ಪ್ರಯಾಣಿಕರಿಗೂ ಅಡ್ಡಿಪಡಿಸುವ ನಿರ್ಲಕ್ಷ್ಯತನ ಜೊತೆಗೆ ಬೇಜವಾಬ್ದಾರಿತನ ಚರ್ಚೆಯ ಇನ್ನೊಂದು ವಿಷಯ.

ಪ್ರಯಾಣಿಕರ ಇಂತಹ ವರ್ತನೆ ಅಂದಿನ ವಿಮಾನ ಅಪಘಾತದಲ್ಲಿ ಮಾತ್ರ ಗಮನಕ್ಕೆ ಬಂದಿದ್ದರೆ ವಿಶೇಷವಾಗಿ ಭಾರತೀಯ ಪ್ರಯಾಣಿಕರ ಮೇಲೆ ಟೀಕೆಯ ಪ್ರಹಾರ ಜಗತ್ತಿನ ಎಲ್ಲ ಕಡೆಯಿಂದ ಹರಿದು ಬರುತ್ತಿತ್ತೇನೋ. 2013ರಲ್ಲಿ ದಕ್ಷಿಣ ಕೊರಿಯಾದಿಂದ ಹೊರಟ ವಿಮಾನವೊಂದು ಅಮೆರಿಕಾದ ಸ್ಯಾನ್ ಫ್ರಾನ್ಸಿಸ್ಕೋ ದಲ್ಲಿ ಇಂತಹದೇ ಅಪಘಾತಕ್ಕೆ ಒಳಗಾದಾಗ ಪ್ರಯಾಣಿಕರ ಇಂತಹದೇ ವರ್ತನೆ ಕಂಡು ಬಂದಿತ್ತು. ಹೇಗೋ ಸಾವರಿಸಿಕೊಂಡು ನಿಂತ ವಿಮಾನದಿಂದ ತ್ವರಿತವಾಗಿ ನಿರ್ಗಮಿಸಬೇಕಾದ ಹೊತ್ತಲ್ಲಿ ತಮ್ಮ ಸೊತ್ತುಗಳಿಗಾಗಿ ಗಡಿಬಿಡಿಯಲ್ಲಿ ಪ್ರಯಾಣಿಕರು ತಡಕಾಡುತ್ತಿದ್ದರು. ಆ ಅಪಘಾತದಲ್ಲಿ ಕೊನೆಯ ಆಸನದಲ್ಲಿ ಕುಳಿತು ಪ್ರಯಾಣಿಸಿದ ಇಬ್ಬರು ಚೀನೀಯರು ಸರಿಯಾದ ಸಮಯದೊಳಗೆ ವಿಮಾನದಿಂದ ಹೊರಬರಲಾಗದೆ ಬೆಂಕಿಗೆ ತುತ್ತಾಗಿ ಮೃತರಾದರು.

ದುಬೈಯಲ್ಲಿ ಮೊನ್ನೆ ನಡೆದ ಅಪಘಾತಕ್ಕೆ ಕುಸಿದಿಳಿಯುವ ಅಪಘಾತ ಅಥವಾ ಅವರೋಹಣ ವೈಫಲ್ಯದ ಅಪಘಾತ (Crash Landing) ಎಂದು ಹೇಳಬಹುದು. ವಿಮಾನ ಕೆಳಗಿಳಿಯುವ ಸಿದ್ಧತೆಯಾಗಿ ನಿಲ್ದಾಣದ ಹತ್ತಿರ ಬರುತ್ತಿದ್ದಂತೆಯೇ ಹಾರುವಾಗ ಮಡಚಿ ಒಳಗಿಟ್ಟುಕೊಂಡ ತನ್ನ ಚಕ್ರಗಳನ್ನು (Landing Gear) ಹೊರ ಚಾಚುತ್ತದೆ. ವಿಮಾನದ ರೆಕ್ಕೆಗಳು,